ನ್ಯಾಮಂತಿ ತಾಲ್ಲೂಕಿನಲ್ಲಿರುವ ಚಿನ್ನದ ಗಣಿಗಳ

೧೫೯೯ ಶ್ರೀ ಎಂ. ಆನಂದರಾವ್ (ಶಿವಮೊಗ್ಗ) ಮಾನ್ಯ ಶ್ರೀ ಕೈಗಾರಿಕಾ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

(ಅ) ಶಿವಮೊಗ್ಗ ಜಿಲ್ಲಾ ನ್ಯಾಮಂತಿ ತಾಲ್ಲೂಕು ಕುದುರೆಕೊಂಡ ಮಂತ್ತು ಪಲವನಹಳ್ಳಿ ಚಿನ್ನದ ಗಣಿಗಳಲ್ಲಿ ಚಿನ್ನದ ಅದಿರನ್ನು ತೆಗೆಯುವ ಬಗ್ಗೆ ಸರ್ಕಾರದವರ ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕೈಗಾರಿಕಾ ಮಂತ್ರಿಗಳು) ಈ ಪಶ್ನೆಗಳಿಗೆ ಉತ್ತರಿಸುವರು.—

(ಅ) ಚಿನ್ನಕ್ಕಾಗಿ ಅನ್ವೇಷಣೆ ನಡೆಸುವುದು ಕೇಂದ್ರ ಸರ್ಕಾರದ ವ್ಯಾಪ್ತಿಗೊಳಪಟ್ಟಿದೆ. ಜಿಯಾಲಜಿಕಲ್ ಸರ್ವೆ ಆಫ್ ಇಂಡಿಯಾವು ಪಲವನಹಳ್ಳಿ, ಮತ್ತು ಕುದುರೆಕೊಂಡ ಪ್ರದೇಶಗಳ (ಹೊನ್ನಾಳಿ ತಾಲ್ಲೂಕು ಶಿವಮೊಗ್ಗ ಜಿಲ್ಲೆ) ಚಿನ್ನದ ನಿಕ್ಷೇಪಗಳ ಅನ್ವೇಷಣೆ ನಡೆಸಲು ತನ್ನ ಪಂಚವಾರ್ಷಿಕ ಕಾರ್ಯಕ್ರಮದಲ್ಲಿ ಸೇರಿಸಿಕೊಂಡಿದೆ. ಈ ಪಂಚವಾರ್ಷಿಕ ಕಾರ್ಯಕ್ರಮವು ೧೯೮೦ ರಿಂದ ೧೯೮೫ನೆಯ ಸಾಲಿನಗಳಿಗಾಗಿ ರೂಪುಗೊಂಡಿದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಬೆಣಚಕಲ್ಲು ಮತ್ತು ಬೇರೆ ಬೇರೆ ಶಿಲೆಗಳು ಅಲ್ಲಿವೆ. ಬಂಗಾರ ತೆಗೆಯುವ ಬಗ್ಗೆ ಒಂದು ಶತಮಾನದ ಹಿಂದೆ ಅಲ್ಲಿ ಅನ್ವೇಷಣೆ ನಡೆದಿದೆ. ೧೯೦೭ರಲ್ಲಿ, ೧೯೧೧ನೇ ಇಸವಿಯಲ್ಲಿ ಬಂಗಾರ ಅನ್ವೇಷಣೆ ನಡೆದಿದೆ. ಪುನಃ ಕೇಂದ್ರ ಸರ್ಕಾರ ಈ ಯೋಜನೆಯನ್ನು ತೆಗೆದುಕೊಂಡು ೧೯೮೦ ರಿಂದ ಕೆಲಸ ಪ್ರಾರಂಭ ಮಾಡಿದೆ. ೧೯೮೫ರ ವರೆಗೆ ಅನ್ವೇಷಣೆ ನಡೆಯುತ್ತದೆ. ಆದರ ಬಗ್ಗೆ ಒಂದು ರಿಪೋರ್ಟ್ ಬರುತ್ತದೆ ಅಲ್ಲಿಯವರೆಗೆ ಕಾಯಬೇಕಂ.

ಶ್ರೀ ಎಂ. ಆನಂದರಾವ್.—ಮಳೆಗಾಲದಲ್ಲಿ ನೀರು ಬಂದಾಗ ಬಂಗಾರದ ರೇಖೆಗಳು ಸಿಗಂತ್ತವೆ ಎಂಬ ವರ್ತಮಾನ ಇದೆ. ಈ ಡಾಗಕ್ಕೆ ಪ್ರವೇಶ ಮಾಡದಹಾಗೆ ತಡೆ ಮಾಡುತ್ತೀರಾ ?

ಶ್ರೀ ಎಸ್. ಆರ್. ಬೊಮ್ಮಾಯಿ.—ಮಳೆ ಬಂದಾಗ ಬೆಣಚುಕಲ್ಲಿನಲ್ಲಿ ಅಲ್ಲಿ ಇಲ್ಲಿ ಬಂಗಾರದ ಅಂಶ ಕಂಡುಬಂದರೂ ಅದು ಅಲ್ಪ ಪ್ರಮಾಣದ್ದು. ಅನ್ವೇಷಣಾ ಕಾರ್ಯ ಪಡೆಯುತ್ತಿದೆ. ೧೯೮೫ನೇ ಇಸವಿಯೊಳಗೆ ರಿಪೋರ್ಟು ಬರುತ್ತದೆ. ಆದರ ಮೇಲೆ ಏನು ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ.

ಅಧ್ಯಕ್ಷರು.—ಪ್ರಶ್ನೋತ್ತರ ವೇಳೆ ಮುಗಿಯಿತು.

(ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು)

ಅಧ್ಯಕ್ಷರು.—ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

SRI A. LAKSHMISAGAR (Hon'ble Minister for Law and Parliamentary Affairs).—Sir, I beg to lay on the table of the House Questions for written Answers—Twenty-Sixth list.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಚೋಳನಾಯಕನ ಹಳ್ಳಿಗೆ ಸೌಲಭ್ಯವನ್ನು ಕಲ್ಪಿಸುವಲ್ಲಿ
ವಿಳಂಬವಾಗುತ್ತಿರುವುದು

೮೮೦ ಶ್ರೀ ಎಂ.ಎಸ್. ಕೃಷ್ಣನ್ (ರಾಜಾಜಿನಗರ).—ಮಾನ್ಯ ಸಾರಿಗೆ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೆಂಗಳೂರು ಉತ್ತರ ತಾಲ್ಲೂಕು, ಕಸಬ ಹೋಬಳಿ, ಚೋಳನಾಯಕನ ಹಳ್ಳಿಯ ಗ್ರಾಮ ಪಂಚಾಯಿತಿಗೆ ಸಿಟಿ ಮಾರುಕಟ್ಟೆ ಸುಭಾಷ್‌ನಗರ, ಶಿವಾಜಿನಗರ ಮತ್ತು ಯಶವಂತಪುರಗಳಿಂದ ನಗರ ಸಾರಿಗೆ ಬಸ್ಸುಗಳ ಸೌಕರ್ಯ ಕಲ್ಪಿಸಬೇಕೆಂದು ಕಳೆದ ೧೯೮೧ನೇ ಸಾಲಿನಿಂದ ಸದರಿ ಊರಿನ ಸಂಘದವರು ಒತ್ತಾಯಪಡಿಸುತ್ತಿರುವುದು ನಿಜವಲ್ಲವೆ.